ದೂರವಾಣಿ :22276601

ಫ್ಯಾಕ್ಸ್ : 22276605

E.Mail: cenhpwd@yahoo.co.in

**ಕರ್ನಾಟಕ ಸರ್ಕಾರ**

**[ಲೋಕೋಪಯೋಗಿ ಇಲಾಖೆ]**

ಸಂ:ಮುರಾಹೆ:ತಾಂಸ-3:ಸಇಂ-4:ಆರ್ಥಿಕ ಬಿಡ್:2024-25 / 2725

ಮುಖ್ಯ ಇಂಜಿನಿಯರ್‌ರವರ ಕಛೇರಿ,
ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು,
ದಿನಾಂಕ: 20 DEC 2024

ಗೆ,

ಕಾರ್ಯಪಾಲಕ ಅಭಿಯಂತರರು,
ರಾಷ್ಟ್ರೀಯ ಹೆದ್ದಾರಿ ವಿಭಾಗ,
ತುಮಕೂರು.

ಮಾನ್ಯರೆ,

**ವಿಷಯ:** **ಕೇಂದ್ರ ರಸ್ತೆ ಮತ್ತು ಮೂಲ ಸೌಕರ್ಯ ನಿಧಿಯಡಿಯಲ್ಲಿ 2023-24ನೇ ಸಾಲಿನಲ್ಲಿ ಅನುಮೋದನೆಯಾದ** "Resurfacing to SH-48 Kumata Kodamadagu Road from ch: 348.91 km to 351.20 km , 351.70 km to 352.40 km , 353.40 km to 355.10 km , 355.40 km to 356.10 km , 356.90 km to 358.50 km , 358.70 km to 361.40 km , 363.50 km to 366.40 km, 368.60 km to 369.30 km , 369.70 km to 370.20 km , 371.55 km to 374.60 km , 375.40 km to 376.20 km, 376.90 km to 379.23 km in Selected Reaches in Pavagada Taluk (Job No. CRF-KNT-2023-24-138)" **ಕಾಮಗಾರಿಯ ಆರ್ಥಿಕ ಬಿಡ್‌ಗೆ ಅನುಮೋದನೆ ನೀಡುವ ಬಗ್ಗೆ.**

**ಉಲ್ಲೇಖ:**
1. **ಸರ್ಕಾರದ ಆದೇಶ ಸಂಖ್ಯೆ:PWD:423:FC-1:2018 Bangalore Dtd: 24.09.2018.**
2. **ಈ ಕಛೇರಿಯ ತಾಂತ್ರಿಕ ಮಂಜೂರಾತಿ ಆದೇಶ ಸಂ: 1263 ದಿನಾಂಕ: 05.09.2024.**
3. **ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ರವರ ಪತ್ರ ಸಂಖ್ಯೆ: 2276-277, ದಿನಾಂಕ: 13.12.2024.**

*****

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿತ ಕಾಮಗಾರಿಯ ಆರ್ಥಿಕ ಬಿಡ್‌ಗೆ ಅನುಮೋದನೆ ಸಂಬಂಧ ಉಲ್ಲೇಖ (3)ರಲ್ಲಿ ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರುರವರ ಪತ್ರದೊಂದಿಗೆ ಸಲ್ಲಿಸಿರುವ ದಾಖಲೆ / ವಿವರಗಳನ್ನು ಹಾಗೂ ಅವರ ಶಿಫಾರಸ್ಸನ್ನು ಪರಿಗಣಿಸಿ ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ವಲಯದ 2022-23ನೇ ಸಾಲಿನ 2024-25ನೇ ಸಾಲಿಗೆ ಮುಂದುವರಿದ ಚಾಲ್ತಿ ದರಸೂಚಿಯನ್ವಯ ಟೆಂಡರ್‌ಗಿಟ್ಟ ಮೊತ್ತ ರೂ.4,85,30,879.00 (ನಾಲ್ಕು ಕೋಟಿ ಎಂಬತ್ತೈದು ಲಕ್ಷದ ಮೂವತ್ತು ಸಾವಿರದ ಎಂಟು ನೂರ ಎಪ್ಪತ್ತೊಂಬತ್ತು ರೂಪಾಯಿಗಳು) ಗಳಿಗೆ ಹೋಲಿಸಿದಂತೆ ಟೆಂಡರ್‌ನಲ್ಲಿ ಪಾಲ್ಗೊಂಡು ಶೇ.(+) 4.60 (ಶೇಕಡ ನಾಲ್ಕು ಬಿಂದು ಆರು ಸೊನ್ನೆ ಮಾತ್ರ) ರಷ್ಟು ಅಧಿಕ ಇರುವ ದರಗಳನ್ನು ಸಲ್ಲಿಸಿರುವ L-1 ಗುತ್ತಿಗೆದಾರರಾದ M/s. ಜಯಪ್ರಕಾಶ್ ಇಂಜಿನಿಯರ್ಸ್ ಅಂಡ್ ಕಂಟ್ರಾಕ್ಟರ್ಸ್, ಒಂದನೇ ದರ್ಜೆ ಗುತ್ತಿಗೆದಾರರ ನಮೂದಿತ ಟೆಂಡರ್ ಮೊತ್ತ ರೂ.5,07,47,508.00 (ಐದು ಕೋಟಿ ಏಳು ಲಕ್ಷದ ನಲವತ್ತೇಳು ಸಾವಿರದ ಐದು ನೂರ ಎಂಟು ರೂಪಾಯಿಗಳು ಮಾತ್ರ) ಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಂತೆ ಸದರಿಯವರ ಆರ್ಥಿಕ ಬಿಡ್ ಅನ್ನು ಅನುಮೋದಿಸಿದೆ.

1. ಅನುಮೋದಿತ ಟೆಂಡರ್ ಮೊತ್ತ ರೂ.5,07,47,508.00 (ಐದು ಕೋಟಿ ಏಳು ಲಕ್ಷದ ನಲವತ್ತೇಳು ಸಾವಿರದ ಐದು ನೂರ ಎಂಟು ರೂಪಾಯಿಗಳು ಮಾತ್ರ) ಗಳನ್ನು ಮೀರದಂತೆ, ಬಿ.ಓ.ಕ್ಯೂ. ರೀತ್ಯಾ ಕಾರ್ಯಾದೇಶ ನೀಡತಕ್ಕದ್ದು ಮತ್ತು ಪ್ರತಿಯನ್ನು ಈ ಕಛೇರಿಗೆ ತಪ್ಪದೇ ಸಲ್ಲಿಸತಕ್ಕದ್ದು.
2. ಕಡಿಮೆ ನಮೂದಿಸಿರುವ ಟೆಂಡರ್ ಮೊತ್ತಕ್ಕೆ (Unbalanced amount) ಬ್ಯಾಂಕ್ ಗ್ಯಾರಂಟಿ (Bank Guarantee) ಯನ್ನು ಟೆಂಡರ್ ನಿಯಮಾನುಸಾರ ಪಡೆದು ಟೆಂಡರ್ ಕರಾರು ಮಾಡಿಕೊಳ್ಳುವುದು.
3. ಟೆಂಡರ್‌ನಲ್ಲಿನ ಅಂಶ, ಪರಿಮಾಣ, ದರ, ಟೆಂಡರ್ ಶೇಕಡ, ಟೆಂಡರ್ ಮೊತ್ತ ಮತ್ತೊಮ್ಮೆ ದೃಢೀಕರಿಸಿಕೊಳ್ಳುವುದು.

4. ಕೆಲಸ ವಹಿಸಿಕೊಡುವ ಮುನ್ನ ಸದರಿ ಗುತ್ತಿಗೆದಾರರ ಬಳಿ ಇರುವ ಸಾಮಗ್ರಿ, ಯಂತ್ರೋಪಕರಣ, ತಾಂತ್ರಿಕ ಸಿಬ್ಬಂದಿ, ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ದೃಢೀಕರಿಸಿಕೊಳ್ಳತಕ್ಕದ್ದು.

5. ಟೆಂಡರ್ ಕರಾರು ಮಾಡಿಕೊಳ್ಳುವ ಮುನ್ನ ಸದರಿ ಕಾಮಗಾರಿಯ ಅಂದಾಜು ಮೊತ್ತಕ್ಕೆ ಅನ್ವಯಿಸುವ Standard Tender Document ರೀತ್ಯಾ ಕಡ್ಡಾಯವಾಗಿ ಎಲ್ಲಾ ವಿಧಿ ನಿಯಮ ಪಾಲಿಸತಕ್ಕದ್ದು.

6. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯನ್ನು ಈಗಾಗಲೇ ಟೆಂಡರ್‌ನ ಅಧಿಸೂಚನೆಯಲ್ಲಿ ನಿಗಧಿಸಿದ ಅವಧಿ ಮೀರದಂತೆ ನೋಡಿಕೊಳ್ಳತಕ್ಕದ್ದು.

7. ಸದರಿ ಕಾಮಗಾರಿ ಪೂರ್ಣಗೊಳಿಸಲು ಅವಶ್ಯಕ ಎಲ್ಲಾ ಅಂಶಗಳನ್ನು ಪರಿಗಣಿಸಿ ಈಗಾಗಲೇ ನಿಗಧಿಪಡಿಸಿದ ಅವಧಿಗೆ ಸೀಮಿತಗೊಳಿಸಿ PERT Chart, Bar Chart ತಯಾರಿಸಿ ತೃಪ್ತಿಕರವಾಗಿ ವಿಶಿಷ್ಟ ವಿವರಣೆಯಂತೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.

8. ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿ ಮತ್ತು ಪೂರ್ಣಗೊಂಡ ಅಂಶಗಳ ಗುಣಮಟ್ಟದ ಬಗ್ಗೆ ಸಕ್ಷಮ ಗುಣನಿಯಂತ್ರಣ ಅಧಿಕಾರಿಗಳಿಂದ ದೃಢೀಕರಣ ಪಡೆಯತಕ್ಕದ್ದು.

9. ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ:RW/BNG/GENN/CRF/121/2020 ದಿನಾಂಕ:13.03.2024 ರ ಆದೇಶದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ವಯ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮ ವಹಿಸತಕ್ಕದ್ದು.

10. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಲೋಇ:06:ಸಿ.ಆರ್.ಎಫ್:2024(ಇ) ಬೆಂಗಳೂರು ದಿನಾಂಕ: 29.08.2024ರಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ವಯ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮವಹಿಸತಕ್ಕದ್ದು.

11. ಸರ್ಕಾರದ ಸುತ್ತೋಲೆ ಸಂಖ್ಯೆ:LAW-LAC/198/2024 ದಿನಾಂಕ:16.11.2024ರಂತೆ ಗುತ್ತಿಗೆ ಕರಾರಿನಲ್ಲಿ ಅರ್ಬಿಟ್ರೇಷನ್ ಕ್ಲಾಸ್‌ಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರರವರು ಕಡ್ಡಾಯವಾಗಿ ಕ್ರಮವಹಿಸತಕ್ಕದ್ದು.

ತಮ್ಮ ವಿಶ್ವಾಸಿ,

**ಕರಡು ಪ್ರತಿ ಮುಖ್ಯ ಇಂಜಿನಿಯರ್ ರವರಿಂದ ಅನುಮೋದಿಸಲ್ಪಟ್ಟಿದೆ.**

Ranithreat 20/12/24

ಮುಖ್ಯ ಇಂಜಿನಿಯರ್ ಪರವಾಗಿ
ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು.

Signature Not Verified
Digitally signed by SHIVAKUMAR
Date: 2025.01.01 15:08:51 IST
Location: eProcure-EPROC